# ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ

## ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ

## ದಕ್ಷಿಣ ಕನ್ನಡ ಜಿಲ್ಲೆಯ ಕೃಷಿ ಹವಾಮಾನ ಸಲಹಾ ಸೂಚಕ

(ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಹಾಗೂ ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ, ಬ್ರಹ್ಮಾವರ-576213, ಉಡುಪಿ ಜಿಲ್ಲೆ ಕರ್ನಾಟಕ ಇವರ ಜಂಟಿ ಪ್ರಸಾರ)

**ಹವಾಮಾನ ಮುನ್ಸೂಚನೆಯ ಅವಧಿ 15-03-2023 ರಿಂದ 19-03-2023**

ಸಂ. ಗ್ರಾ.ಕೃ.ಹ.ಸೇ.ಬ/021/2023 ದಿನಾಂಕ: 14.03.2023

ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು, ಇವರು ದಕ್ಷಿಣ ಕನ್ನಡ ಜಿಲ್ಲೆಗೆ ಮುಂದಿನ ಐದು ದಿನಗಳು ದಿನಾಂಕ 15-03-2023 ರಿಂದ 19-03-2023 ರ ವರೆಗೆ ಲಭ್ಯವಿರುವ ಹವಾಮಾನ ಮುನ್ಸೂಚನೆ ಈ ಕೆಳಕಂಡಂತೆ ನೀಡಿರುತ್ತಾರೆ

| ಹವಾಮಾನದ ಅಂಶಗಳು | ಕ್ರೋಢೀಕರಿಸಿದ ಹವಾಮಾನ ಮುನ್ಸೂಚನೆ | | | | | ಹಿಂದಿನ ವಾರದ ಹವಾಮಾನ ಪರಿಸ್ಥಿತಿಯ ಒಟ್ಟು/ಸರಾಸರಿ | ಮುಂದಿನ ಐದು ದಿನಗಳ ಹವಾಮಾನ ಮುನ್ಸೂಚನೆಯ ಒಟ್ಟು/ಸರಾಸರಿ |
|---|---|---|---|---|---|---|---|
| | ದಿನ-1 (15.03.2023) | ದಿನ-2 (16.03.2023) | ದಿನ-3 (17.03.2023) | ದಿನ-4 (18.03.2023) | ದಿನ-5 (19.03.2023) | | |
| ಮಳೆ ಪ್ರಮಾಣ (ಮಿ.ಮೀ.) | 4 | 12 | 8 | 13 | 13 | 0 | 50↑ |
| ಗರಿಷ್ಠ ಉಷ್ಣಾಂಶ (°C) | 37 | 33 | 34 | 33 | 33 | 37 | 34↓ |
| ಕನಿಷ್ಠ ಉಷ್ಣಾಂಶ (°C) | 16 | 16 | 16 | 14 | 13 | 20.6 | 15↓ |
| ಮೋಡದ ಹೊದಿಕೆ (ಒಕ್ಟಾ) | 1 | 1 | 1 | 4 | 4 | 0 | 2↑ |
| ಗರಿಷ್ಠ ಆರ್ದ್ರತೆ (ಶೇ.) | 81 | 87 | 89 | 81 | 85 | 80.4 | 84.6↑ |
| ಕನಿಷ್ಠ ಆರ್ದ್ರತೆ (ಶೇ.) | 30 | 37 | 41 | 37 | 32 | 42 | 35.4↓ |
| ಗಾಳಿಯ ವೇಗ (Kmph) | 6 | 6 | 6 | 7 | 7 | 5.6 | 6.4↑ |
| ಗಾಳಿಯ ದಿಕ್ಕು (°) | 110 | 250 | 110 | 290 | 90 | 266 | 170↓ |
| ಮುನ್ಸೂಚನೆ | ISL+TSH | ISL+TSH | ISL+TSH | ISL+TSH | ISL+TSH | | |
| ಸಂಭವನೀಯತೆ (%) | 1-25 | 1-25 | 1-25 | 1-25 | 1-25 | | |

**ಭಾರತ ಹವಾಮಾನ ಇಲಾಖೆ, ನವದೆಹಲಿ ಮತ್ತು ರಾಜ್ಯ ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ವಿಸ್ತೃತ ಮಳೆ ಮುನ್ಸೂಚನೆಯ ಪ್ರಕಾರ ಕರ್ನಾಟಕದ ಕರಾವಳಿ ತೀರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ದಿನಾಂಕ 19.03.2023 ರಿಂದ 25.03.2023 ರವರೆಗೆ ವಾಡಿಕೆಗಿಂತ ಹೆಚ್ಚು ಮಳೆಯಾಗುವ ಸಂಭವವಿದೆ.**

### ಹವಾಮಾನ ಪರಿಸ್ಥಿತಿ ಮತ್ತು ಮುನ್ಸೂಚನೆ ಸಾರಾಂಶ



ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಇವರು, ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಮುನ್ಸೂಚನೆಯ ಪ್ರಕಾರ, **ಮುಂದಿನ ಐದು ದಿನಗಳಲ್ಲಿ ಭಾಗಶ: ಮೋಡಕವಿದ ವಾತಾವರಣವಿರಲಿದ್ದು ಕೆಲವೆಡೆ ಗುಡುಗು-ಮಿಂಚು ಇರಲಿದ್ದು ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ.** ಮುಂದಿನ ಐದು ದಿನಗಳಲ್ಲಿ ಗರಿಷ್ಠ ತಾಪಮಾನವು **33-37°C** ಇರುತ್ತದೆ ಮತ್ತು ಕನಿಷ್ಠ ತಾಪಮಾನವು **13-16°C** ಇರುತ್ತದೆ. ಸರಾಸರಿ ಸಾಪೇಕ್ಷ ಆದ್ರತೆಯು ಬೆಳಗಿನ ಸಮಯದಲ್ಲಿ **81%** ರಿಂದ **89%** ರಷು ಇರುತ್ತದೆ. ಹಾಗೂ ಮಧ್ಯಾಹ್ನದ ಸಮಯದಲ್ಲಿ **30%** ರಿಂದ **41%** ರಷ್ಟು ಇರುತ್ತದೆ. ಸರಾಸರಿ ಗಾಳಿಯ ವೇಗವು **6-7** ಕೀ.ಮೀ. ಪ್ರತಿ ಘ,ವೇಗದಲ್ಲಿ ಬೀಸಲಿದೆ. ಈ ಹವಾಮಾನ ಪರಿಸ್ಥಿತಿಯನ್ನು ಪರಿಗಣಿಸಿದರೆ, ರೈತರು ಈ ಕೆಳಕಂಡ ಕೃಷಿ ಸಲಹೆಗಳನ್ನು ಅನುಸರಿಸುವಂತೆ ಸಲಹೆ ನೀಡಲಾಗಿದೆ.

**Mobile Applications developed by India Meteorological Department for the benefit of Farming Community Farmers are suggested to download the app using below links**

| | Mausam: | Meghdoot: | Damini: |
|---|---|---|---|
| Andriod: | https://play.google.com/store/apps/details?id=com.imd.masuam | https://play.google.com/store/apps/details?id=com.aas.meghdoot | https://play.google.com/store/apps/details?id=com.lightening.live.damini |
| Apple OS: | https://apps.apple.com/us/app/id1522893967 | https://apps.apple.com/in/app/meghdoot/id1474048155 | https://apps.apple.com/app/id1502385645 |

**Decadal Rainfall (mm) Comparison:**

| Year | 30 years Mean | 2012 | 2013 | 2014 | 2015 | 2016 | 2017 | 2018 | 2019 | 2020 | 2021 | 2022 | 2023 |
|---|---|---|---|---|---|---|---|---|---|---|---|---|---|
| Rainfall | 3792.9 | 2984.2 | 3325.3 | 2816.3 | 2383.4 | 2827.1 | 3000 | 3381.2 | 4118.4 | 4110.8 | 4110.8 | 3879.9 | 0 |
| Rainy days | 110 | 105 | 127 | 112 | 107 | 119 | 121 | 112 | 123 | 126 | 152 | 125 | 0 |

| Realised Rainfall (09[nd] FEB to 15[th] FEB, 2023) | Rainfall Forecast Map (17th FEB to 23rd Feb 2023) | Standardized Precipitation Index Outlook (19.01.2023 to 15.02.2023) | Normalized Difference Vegetation Index |
|---|---|---|---|
|  |  |  |  |

## ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಹವಾಮಾನ ಮುನ್ಸೂಚನೆ ಆಧಾರಿಸಿ ನೀಡಿದ ಕೃಷಿ ಸಲಹೆಗಳು

### ತೋಟಗಾರಿಕೆ ಬೆಳೆಗಳು:

| ಬೆಳೆ | ಕೃಷಿ ಸಲಹೆಗಳು |
|---|---|
| ಅಡಿಕೆ (ನೀರಿನ ನಿರ್ವಹಣೆ) | ತಾಪಮಾನ ಹೆಚ್ಚಿರುವ ಕಾರಣದಿಂದ ಬೆಳೆಗೆ ಅಗತ್ಯ ಪ್ರಮಾಣದ ನೀರನ್ನು ನೀಡುವುದು ಹಾಗೂ ಬೆಳೆಗಳ ಅವಶೇಷಗಳನ್ನು ಬುಡದ ಸುತ್ತ ಹಾಕುವುದರಿಂದ ತೇವಾಂಶ ಸಂರಕ್ಷಣೆಯಾಗುವುದು.<br>1–3 ವರ್ಷ ಪ್ರಾಯದ ಅಡಿಕೆ ಗಿಡಗಳಿಗೆ ನೆರಳು ಒದಗಿಸುವುದು ಸೂಕ್ತ ಮತ್ತು ಬೇಸಿಗೆಯಲ್ಲಿ ಪ್ರತಿ ದಿನ ಒಂದು ಗಿಡಕ್ಕೆ 20 ಲೀ. ನೀರನ್ನು ನೀಡುವುದು. |
| ಅಡಿಕೆ (ಹಿಂಗಾರ ಒಣಗುವ ರೋಗ) | ರೈತರು ಹಿಂಗಾರ ಒಣಗುವ ರೋಗವನ್ನು ನಿಯಂತ್ರಣ ಮಾಡಲು 2 ಗ್ರಾಂ ನಷ್ಟು ಕಾರ್ಬೆಂಡೈಜಿಮ್ + ಮ್ಯಾಂಕೋಜೆಬ್ ಅನ್ನು ಪ್ರತಿ ಲೀಟರ್ ನೀರಿಗೆ ಬೆರಸಿ ಸಿಂಪಡಿಸುವುದು. |
| ಅಡಿಕೆ (ಸುಳಿ ತಿಗಣೆ) | ರೈತರು ಸುಳಿ ತಿಗಣೆ ನಿರ್ವಹಣೆ ಮಾಡಲು 1.7 ಮಿ.ಲೀ ನಷ್ಟು ಡೈಮೆಥೋಯೇಟ್ ಅನ್ನು ಪ್ರತಿ ಲೀಟರ್ ನೀರಿಗೆ ಬೆರಸಿ ಸಿಂಪಡಿಸುವುದು ಸೂಕ್ತ. |
| ಅಡಿಕೆ (ಕಳೆ ನಿಯಂತ್ರಣ) | ➢ ತೋಟಗಳಲ್ಲಿ ಕಳೆ ನಿಯಂತ್ರಿಸಲು ಗ್ಲೈಫೋಸೆಟ್ 41% ಎಸ್.ಎಲ್ @ 6ಮಿಲೀ/ಲೀ ಅಥವಾ ಗ್ಲೈಫೋಸೆಟ್ 54% ಎಸ್.ಸಿ @ 4 ಮಿಲೀ/ಲಿ ಅಥವಾ ಗ್ಲೈಫೋಸೆಟ್ 71% ಎಸ್.ಜಿ. 6 ಗ್ರಾಂ. ಪ್ರತಿ ಲೀಟರ್ ನೀರಿಗೆ ಬೆರೆಸಿ ಕಳೆಗಳ ಮೇಲೆ ಸಿಂಪಡಿಸಿ. ಅಡಿಕೆ ಮರಕ್ಕೆ ಸಿಂಪರಣೆ ತಗುಲದಂತೆ ಎಚ್ಚರ ವಹಿಸಿ.<br>➢ ಒಣಗಿದ ಹಿಂಗಾರ ಮತ್ತು ರೋಗ/ಕೀಟ ಭಾದೆಗೆ ತುತ್ತಾದ ಅಡಿಕೆ ಕಾಯಿಗಳನ್ನು ಸಂಗ್ರಹಿಸಿ ನಾಶ ಮಾಡುವುದು. |
| ಅಡಿಕೆ (ನುಸಿ) | ಅಡಿಕೆಯಲ್ಲಿ ನುಸಿಯ ಭಾದೆ ತಗ್ಗಿಸಲು ಪ್ರತಿ ಲೀಟರ್ ನೀರಿಗೆ 1.7 ಮಿ.ಲೀ ಡೈಮೆಥೋಯೇಟ್ ಅಥವಾ 0.6 ಮಿ.ಲೀ ಇಮಿಡಾಕ್ಲೋಪ್ರಿಡ್ ಅನ್ನು ಪ್ರತಿ ಲೀಟರ್ ನೀರಿಗೆ ಮಿಶ್ರಿಸಿ ಸಿಂಪಡಿಸುವುದು ಸೂಕ್ತ |
| ತೆಂಗು (ಕಳೆ ನಿರ್ವಹಣೆ) | ತೋಟಗಳಲ್ಲಿ ಕಳೆ ನಿಯಂತ್ರಿಸಲು ಗ್ಲೈಫೋಸೆಟ್ 41% ಎಸ್.ಎಲ್ @ 6ಮಿಲೀ/ಲೀ ಅಥವಾ ಗ್ಲೈಫೋಸೆಟ್ 54% ಎಸ್.ಸಿ @ 4 ಮಿಲೀ/ಲಿ ಅಥವಾ ಗ್ಲೈಫೋಸೆಟ್ 71% ಎಸ್.ಜಿ. 6 ಗ್ರಾಂ. ಪ್ರತಿ ಲೀಟರ್ ನೀರಿಗೆ ಬೆರೆಸಿ ಕಳೆಗಳ ಮೇಲೆ ಸಿಂಪಡಿಸಿ. ತೆಂಗಿನ ಮರಕ್ಕೆ ಸಿಂಪರಣೆ ತಗುಲದಂತೆ ಎಚ್ಚರ ವಹಿಸಿ. |
| ತೆಂಗು (ನೀರಿನ ನಿರ್ವಹಣೆ) | ತಾಪಮಾನ ಹೆಚ್ಚಿರುವ ಕಾರಣದಿಂದ ಬೆಳೆಗೆ ಅಗತ್ಯ ಪ್ರಮಾಣದ ನೀರನ್ನು ನೀಡುವುದು ಹಾಗೂ ಬೆಳೆಗಳ ಅವಶೇಷಗಳನ್ನು ಬುಡದ ಸುತ್ತ ಹಾಕುವುದರಿಂದ ತೇವಾಂಶ ಸಂರಕ್ಷಣೆಯಾಗುವುದು. ಬೇಸಿಗೆಯಲ್ಲಿ ಪ್ರತಿ ದಿನ ಒಂದು ಗಿಡಕ್ಕೆ 45 ಲೀ. ನೀರನ್ನು ನೀಡುವುದು. |
| ಬಾಳೆ (ಸಾಮಾನ್ಯ ಸಲಹೆ) | 5 ತಿಂಗಳ ನಂತರ ಪ್ರತಿ ಲೀಟರ್ ನೀರಿಗೆ 5ಗ್ರಾಂ. ಬನಾನ ಸ್ಪೆಷಲ್(ಲಘು ಪೋಷಕಾಂಶ) ಮಿಶ್ರಿಸಿ ಸಿಂಪಡಿಸುವುದು. (15ಲೀ. ಸ್ಪ್ರೇಯರ್‌ಗೆ ಒಂದು ನಿಂಬೆ ಹಣ್ಣು ಹಾಗೂ ಒಂದು ಶಾಂಪೂವನ್ನು ಬೆರೆಸಬೇಕು) |
| ಬಾಳೆ (ನೀರಿನ ನಿರ್ವಹಣೆ) | ತಾಪಮಾನ ಹೆಚ್ಚಿರುವ ಕಾರಣದಿಂದ ಬೆಳೆಗೆ ಅಗತ್ಯ ಪ್ರಮಾಣದ ನೀರನ್ನು ನೀಡುವುದು ಹಾಗೂ ಬೆಳೆಗಳ ಅವಶೇಷಗಳನ್ನು ಬುಡದ ಸುತ್ತ ಹಾಕುವುದರಿಂದ ತೇವಾಂಶ ಸಂರಕ್ಷಣೆಯಾಗುವುದು. ಬೇಸಿಗೆಯಲ್ಲಿ ಪ್ರತಿ ದಿನ ಒಂದು ಗಿಡಕ್ಕೆ 15–20 ಲೀ. ನೀರನ್ನು ನೀಡುವುದು. |
| ಕಾಳುಮೆಣಸು (ನಿಧಾನ ಸೊರಗು ರೋಗ) | ಮುಂಜಾಗ್ರತ ಕ್ರಮವಾಗಿ ರೋಗ ಬಂದಿರುವ ಬಳ್ಳಿಗಳ ಎಲೆಗಳನ್ನು ಕಿತ್ತು ನಾಶಪಡಿಸಬೇಕು ಅನಂತರ ಬೇವಿನ ಹಿಂಡಿ ಮಿಶ್ರಿತ ಅಥವಾ ಸಹ್ಯಾದ್ರಿ ತ್ರಿಶೂಲ್ ಮಿಶ್ರಿತ ಕೊಟ್ಟಿಗೆ ಗೊಬ್ಬರವನ್ನು ಬಳ್ಳಿಗಳಿಗೆ ನೀಡಬೇಕು ಅಥವಾ 2ಗ್ರಾಂ ಮೆಟಾಲಾಕ್ಸಿಲ್+ ಮ್ಯಾಂಕೋಜೆಬ್ ಅನ್ನು ಪ್ರತಿ ಲೀಟರ್ ನೀರಿಗೆ ಬೆರಸಿ ನೀರಿಗೆ ಬೆರಸಿ ಬುಡದ ಸುತ್ತ ಹಾಕಬೇಕು ಅಥವಾ ಸಿಂಪಡಿಸುವುದು. |
| ಕಾಳುಮೆಣಸು (ನೀರಿನ ನಿರ್ವಹಣೆ) | ತಾಪಮಾನ ಹೆಚ್ಚಿರುವ ಕ್ಷಣದಿಂದ ಬೆಳೆಗೆ ಅಗತ್ಯ ಪ್ರಮಾನದ ನೀರನ್ನು ನೀಡುವುದು ಹಾಗೂ ಬೆಳೆಗಳ ಅವಶೇಷಗಳನ್ನು ಬುಡದ ಸುತ್ತ ಹಾಕುವುದರಿಂದ ತೇವಾಂಶ ಸಂರಕ್ಷಣೆಯಾಗುವುದು. |
| ಗೇರು (ಕಾಂಡ ಕೊರಕ) | ರೈತರು ಕಾಂಡ ಕೊರಕ ನಿರ್ವಹಣೆ ಮಾಡಲು ಮೊದಲು ಕಾಂಡ ಕೊರಕ ಭಾಧಿತ ರಂಧ್ರವನ್ನು ತಂತಿಯ ಸಹಾಯದಿಂದ ಶುಚಿಗೊಳಿಸಿ ನಂತರ ಕಾಂಡ ಕೊರಕವನ್ನು ಹೊರತೆಗೆದು ನಾಶಪಡಿಸಬೇಕು. ತದನಂತರ 10 ಮಿ.ಲೀ. ಕ್ಲೋರೋಫೈರೊಪಾಸ್ ಅಥವಾ ಮೊನೊಕ್ರೊಟಾಫಾಸ್ ಪೇಸ್ಟ್ ಅನ್ನು ರಂಧ್ರಕ್ಕೆ ಹಚ್ಚುವುದು. |
| ಕಲ್ಲಂಗಡಿ (ಬುಡ ಕೊಳೆ) | ಬುಡ ಕೊಳೆ ರೋಗ ನಿರ್ವಹಣೆ ಮಾಡಲು ರೈತರು ಪ್ರತಿ ಲೀಟರ್ ನೀರಿಗೆ 20ಗ್ರಾಂ ನಷ್ಟು ಸಹ್ಯಾದ್ರಿ ತ್ರಿಶೂಲ್ ಅಥವಾ ಎ.ಎಮ್.ಸಿ ಯನ್ನು ಬೆರಸಿ ಸಿಂಪಡಿಸುವುದು ಸೂಕ್ತ. |
| ಕಲ್ಲಂಗಡಿ (ರಸ ಹೀರುವ ಕೀಟ) | ರಸ ಹೀರುವ ಕೀಟಗಳ ನಿರ್ವಹಣೆ ಮಾಡಲು ಬ್ಲೂ ಸ್ಟಿಕ್ಕಿ ಟ್ರ್ಯಾಪ್ ಅನ್ನು ಪ್ರತಿ ಎಕರೆಗೆ 8ರಂತೆ ಬಳಸುವುದು ಸೂಕ್ತ. |
| ಹಾಲಬೆಂಡೆ (ಹಳದಿ ಎಲೆ ನಂಜು ರೋಗ) | ಪ್ರಾರಂಭಿಕ ಹಂತದಲ್ಲಿ ಸಸಿಗಳನ್ನು ಕಿತ್ತು ಹಾಕುವುದು ತದನಂತರ ಹಳದಿ ಬಣ್ಣದ ಸ್ಟಿಕ್ಕಿ ಬಲೆಗಳನ್ನು ಹಾಕುವುದು ಅಥವಾ ಬೇವಿನ ಎಣ್ಣೆ (10,000 ಪಿ.ಪಿ.ಎಂ) ಅನ್ನು ನೀರಿನಲ್ಲಿ ಬೆರಸಿ ಸಿಂಪಡಿಸುವುದು ಸೂಕ್ತ. |
| ಹಾಲಬೆಂಡೆ (ಕುಡಿ ಚಿವುಟುವುದು) | ಗಿಡಗಳು 1ಅಡಿ ಎತ್ತರ ತಲುಪಿದ ನಂತರ ಕುಡಿ ಚಿವುಟುವುದು ಸೂಕ್ತ ಇದರಿಂದ ಕೊಂಬೆಗಳು ಹೆಚ್ಚಾಗುವುದು. |
| ಗುಳ್ಳ (ಪೋಷಕಾಂಶ ನಿರ್ವಹಣೆ) | ಸಸಿಗಳಿಗೆ ಗೊಬ್ಬರ ನೀಡುವ ಮುನ್ನ ಬುಡಕ್ಕೆ ಮಣ್ಣು ಏರಿಸುವುದು ಸೂಕ್ತ. |
| ಗುಳ್ಳ (ಬುಡ ಕೊಳೆ) | ಬುಡ ಕೊಳೆ ರೋಗ ನಿರ್ವಹಣೆ ಮಾಡಲು ರೈತರು ಪ್ರತಿ ಲೀಟರ್ ನೀರಿಗೆ 20ಗ್ರಾಂ ನಷ್ಟು ಸಹ್ಯಾದ್ರಿ ತ್ರಿಶೂಲ್ ಅಥವಾ ಎ.ಎಮ್.ಸಿ ಯನ್ನು ಬೆರಸಿ ಬುಡಕ್ಕೆ ಹಾಕುವುದು ಸೂಕ್ತ. |

| | |
|---|---|
| ಗುಳ್ಳ (ನೀರಿನ ನಿರ್ವಹಣೆ) | ಮಣ್ಣಿನ ತೇವಾಂಶದ ಆಧಾರದ ಮೇಲೆ ಬೆಳೆಗೆ ನಿಯಮಿತವಾಗಿ ನೀರು ನೀಡುವುದು ಸೂಕ್ತವಾಗಿದೆ. |
| ಗುಳ್ಳ (ರಸ ಹೀರುವ ಕೀಟ) | ರಸ ಹೀರುವ ಕೀಟ ನಿರ್ವಹಣೆ ಮಾಡಲು ಬೇವಿನ ಎಣ್ಣೆ (10,000 ಪಿ.ಪಿ.ಎಂ) ಅನ್ನು ನೀರಿನಲ್ಲಿ ಬೆರಸಿ ಸಿಂಪಡಿಸುವುದು ಸೂಕ್ತ. |

## ಸಾಮಾನ್ಯ ಸಲಹೆ:

| | |
|---|---|
| ಮಣ್ಣು ಪರೀಕ್ಷೆ | ➢ ರೈತರು ತಮ್ಮ ಕ್ಷೇತ್ರದ ಮಣ್ಣು ಪರೀಕ್ಷೆ ಮಾಡಿಸಲು ಸೂಕ್ತ ಸಮಯವಾಗಿದೆ. |

## ಜಾನುವಾರು ಸಲಹೆ:

| | |
|---|---|
| ಹಸು (ಸಾಮಾನ್ಯ ಸಲಹೆ) | ➢ ಜಾನುವಾರುಗಳಿಗೆ ಕಾಲು ಬಾಯಿರೋಗ, ಚಪ್ಪೆರೋಗ ಕರುಳುಬೇನೆ ರೋಗಗಳ ವಿರುದ್ಧ ಲಸಿಕೆ ಹಾಕುವುದು ಸೂಕ್ತ.<br>➢ ಕೊಟ್ಟಿಗೆಯಲ್ಲಿ ಸ್ವಚ್ಛತೆಯನ್ನು ಕಾಪಾಡುವುದು<br>➢ ಪ್ರಾಣಿಗಳಿಗೆ ಕುಡಿಯಲು ಹೇರಳವಾಗಿ ನೀರನ್ನು ನೀಡುವುದು.<br>➢ ಪ್ರಾಣಿಗಳು ಬಯಲಿನಲ್ಲಿ ಮೇಯುವಾಗ ಬೆನ್ನಿನ ಮೇಲೆ ನೆನೆದ ಗೋಣಿ ಚೀಲವನ್ನು ಹಾಕುವುದು ಸೂಕ್ತವಾಗಿದೆ. |
| ಹಸು (ಚರ್ಮ ಗಂಟು ರೋಗ) | ➢ ಗಂಟಲು ಭಾದೆ ಕಂಡುಬಂದ ರಾಸುಗಳನ್ನು ಪ್ರತ್ಯೇಕವಾಗಿ ಕಟ್ಟುವುದು ಮತ್ತು ಮೇಯಲು ಬಿಡುವುದು.<br>➢ ಪರಾವಲಂಬಿ ಕೀಟಗಳಾದ ಸೊಳ್ಳೆ, ನುಸಿ, ಉಣ್ಣೆಯಿಂದ ರಕ್ಷಿಸುವುದು ಅತ್ಯಂತ ಪರಿಣಾಮಕಾರಿ<br>➢ ಕೊಟ್ಟಿಗೆಯಲ್ಲಿ ಸ್ವಚ್ಛತೆಯನ್ನು ಕಾಪಾಡುವುದು (ಶೇ.2 ಸೋಡಿಯಂ ಹೈಪೋಕ್ಲೋರೈಡ್, ಶೇ.2ರ ಫೀನಾಯಿಲ್ ಮತ್ತು ಶೇ.1ರ ಫಾರ್ಮಲಿನ್ ದ್ರಾವಣಗಳನ್ನು ಉಪಯೋಗಿಸಿ ಸ್ವಚ್ಛಗೊಳಿಸುವುದು)<br>➢ ಪಶುವೈದ್ಯರನ್ನು ಸಂಪರ್ಕಿಸಿ ಲಸಿಕೆಯನ್ನು ಹಾಕಿಸುವುದು<br>➢ ರೋಗ ನಿರೋಧಕ ಶಕ್ತಿ ಹೆಚ್ಚಿಸಲು ಸಮತೋಲನ ಆಹಾರವನ್ನು ನೀಡುವುದು. |

(ಈ ಮೇಲಿನ ಬೆಳೆ ಸಲಹೆಯು ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ಹವಾಮಾನ ಮುನ್ಸೂಚನೆಯ ಆಧಾರವಾಗಿದೆ)

ಶ್ರೀ. ಪ್ರವೀಣ್ ಕೆ.ಎಮ್,
ತಾಂತ್ರಿಕ ಅಧಿಕಾರಿಗಳು,
ಜಿ.ಕೆ.ಎಮ್.ಎಸ್–ವಿಭಾಗ,
ವ.ಕೃ.ತೋ.ಸಂ.ಕೇ–ಬ್ರಹ್ಮಾವರ.

ಡಾ. ಕೆ. ವಿ. ಸುಧೀರ್ ಕಾಮತ್,
ನೊಡಲ್ ಅಧಿಕಾರಿಗಳು,
ಜಿ.ಕೆ.ಎಮ್.ಎಸ್–ವಿಭಾಗ,
ವ.ಕೃ.ತೋ.ಸಂ.ಕೇ–ಬ್ರಹ್ಮಾವರ.